# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 1171 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ. ಕುಶಾಲಪ್ಪ ಎಂ.ಪಿ.(ಸುಜಾ)<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 19.12.2024 |
| **ಉತ್ತರಿಸುವ ಸಚಿವರು** | : | ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮವನ್ನಾಗಿ ಉತ್ತೇಜಿಸುವ ಯಾವುದಾದರೂ ಹೊಸ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹೌದು. ಬಂದಿದೆ.<br>ಕೊಡಗು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ, ಸ್ವೀಕೃತವಾಗಿರುವ ಪ್ರಸ್ತಾವನೆಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಕುಶಾಲನಗರ ಪಟ್ಟಣದ ಸೋಮೇಶ್ವರ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಯಾವ ಹಂತದಲ್ಲಿದೆ; ಸದರಿ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು; ಬಿಡುಗಡೆಯಾದ ಅನುದಾನ ಎಷ್ಟು; ಹಣ ಬಿಡುಗಡೆಯಾಗದೆ ಇದಲ್ಲಿ ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ:ಟಿಒಆರ್/156/ಟಿಡಿಪಿ/2022, ದಿನಾಂಕ:20.06.2022ರಲ್ಲಿ ಕೊಡಗು ಜಿಲ್ಲೆ ಕುಶಾಲನಗರ ಪಟ್ಟಣದ ಸೋಮೇಶ್ವರ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/156/ಟಿಡಿಪಿ/2022, ದಿನಾಂಕ:01.08.2023ರಲ್ಲಿ ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ನಿಗಮ (ಕೆ.ಟಿ.ಐ.ಎಲ್.)ರವರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.<br>ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ/1/ಟಿಎಫ್‌ಪಿ/2023, ದಿನಾಂಕ: 31.07.2023 ರಲ್ಲಿನ ಅಂಶಗಳ ಕ್ರಮ ಸಂಖ್ಯೆ: 3ರಲ್ಲಿ ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (Unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳು ಕ್ರಮವಹಿಸಲು ತಿಳಿಸಲಾಗಿದ್ದು, ಅದರಂತೆ, ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಇ) | ಮಡಿಕೇರಿಯ ರಾಜಾಸೀಟ್ ಬಳಿ ಇರುವ ಟಾಯ್ ಟ್ರೈನ್ ಪ್ರಾರಂಭವಾಗಿದ್ದು ಯಾವಾಗ ಸದರಿ ಟಾಯ್ ಟ್ರೈನ್‌ನಿಂದ ಗಳಿಕೆಯಾಗಿದ್ದ ವಾರ್ಷಿಕ ಆದಾಯ ಎಷ್ಟು; ಮತ್ತು ಇದರ ನಿರ್ವಹಣೆಗೆ ತಗಲುತ್ತಿದ್ದ ವಾರ್ಷಿಕ ವೆಚ್ಚ ಎಷ್ಟು; | ಮಡಿಕೇರಿಯ ರಾಜಾಸೀಟ್ ಬಳಿ ಇರುವ ಟಾಯ್ ಟ್ರೈನ್ 2003ನೇ ಸಾಲಿನಲ್ಲಿ ಪ್ರಾರಂಭವಾಗಿರುತ್ತದೆ. ಸದರಿ ಟಾಯ್ ಟ್ರೈನ್‌ನಿಂದ ಗಳಿಕೆಯಾದ ವಾರ್ಷಿಕ ಆದಾಯ ಹಾಗೂ ನಿರ್ವಹಣೆಗೆ ತಗಲುತ್ತಿದ್ದ ವಾರ್ಷಿಕ ವೆಚ್ಚದ ವಿವರ ಈ ಕೆಳಕಂಡಂತಿದೆ. |

| **ಸಾಲು** | **ಗಳಿಕೆಯಾಗುತ್ತಿದ್ದ ವಾರ್ಷಿಕ ಆದಾಯ** | **ನಿರ್ವಹಣೆಗೆ ತಗುಲುತ್ತಿದ್ದ ವಾರ್ಷಿಕ ವೆಚ್ಚ** |
|---|---|---|
| 2003 | 75,929/- | 15,000/- |
| 2004 | 1,15,128/- | 21,000/- |
| 2005 | 1,70,405/- | 29,000/- |

| | | |
|---|---|---|
| 2006 | 2,30,624/- | 36,000/- |
| 2007 | 3,09,609/- | 43,007/- |
| 2008 | 4,84,814/- | 1,22,844/- |
| 2009 | 6,92,803/- | 1,87,277/- |
| 2010-11 ರಿಂದ 2014-15 ರವರೆಗೆ | 5,01,000/- ನಿರ್ವಹಣೆಯೊಂದಿಗೆ ಆದ ಟೆಂಡರ್ ಮೊತ್ತ | |
| 2015-16 | 8,71,000/- ನಿರ್ವಹಣೆಯೊಂದಿಗೆ ಆದ ಟೆಂಡರ್ ಮೊತ್ತ | |
| 2016-17 | 12,52,000/- ನಿರ್ವಹಣೆಯೊಂದಿಗೆ ಆದ ಟೆಂಡರ್ ಮೊತ್ತ | |
| 2017-18 | 23,02,200/- ನಿರ್ವಹಣೆಯೊಂದಿಗೆ ಆದ ಟೆಂಡರ್ ಮೊತ್ತ | |

| | | |
|---|---|---|
| ಈ) | ಟಾಯ್ ಟ್ರೈನ್ ಒಡಾಟ ಚಾಲ್ತಿಯಲ್ಲಿದೆಯೇ; ಇಲ್ಲದೆ ಇದ್ದಲ್ಲಿ ಕಾರಣವೇನು; ಯಾವ ಕಾಲಮಿತಿಯೊಳಗೆ ಇದನ್ನು ಪ್ರಾರಂಭಿಸಲಾಗುವುದು? (ಸಂಕ್ಷಿಪ್ತ ವಿವರ ನೀಡುವುದು) | ಸುಮಾರು 15 ವರ್ಷಗಳ ಕಾಲ ಚಾಲ್ತಿಯಲ್ಲಿದ್ದ ಟಾಯ್ ಟ್ರೈನ್ ಅನ್ನು 2018-19ನೇ ಸಾಲಿನಲ್ಲಿ ಸ್ಥಗಿತಗೊಳಿಸಲಾಗಿರುತ್ತದೆ. ಅದರ ಟ್ರಾಕ್, ಬೋಗಿ ಇಂಜಿನ್‌ಗಳು ದುರಸ್ಥಿ ಸಾಧ್ಯವಾಗದೇ 2018 ರಿಂದ ಇಲ್ಲಿಯವರೆವಿಗೂ ಟಾಯ್ ಟ್ರೈನ್ ಒಡಾಟ ಚಾಲ್ತಿಯಲ್ಲಿರುವುದಿಲ್ಲ. ದುರಸ್ಥಿ ಮಾಡಲು ಅನುದಾನದ ಅವಶ್ಯಕತೆ ಇರುತ್ತದೆ ಎಂಬುದಾಗಿ ಪೌರಾಯುಕ್ತರು, ನಗರ ಸಭೆ, ಮಡಿಕೇರಿರವರು ತಿಳಿಸಿರುತ್ತಾರೆ.<br><br>ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರ ಆದೇಶ ಸಂಖ್ಯೆ: ಜಾಗ(1)35/2021-22 ದಿನಾಂಕ:09.08.2021ರಲ್ಲಿ ಟಾಯ್ ಟ್ರೈನ್ ಇರುವ ಸ್ಥಳವನ್ನು ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಿರುತ್ತಾರೆ.<br><br>ಟಾಯ್ ಟ್ರೈನ್ ಅನ್ನು ಪ್ರಾರಂಭಿಸುವ ಬಗ್ಗೆ ಇಲಾಖಾ ಪರಿಣಿತರು ಪರಿಶೀಲಿಸಿ ತಾಂತ್ರಿಕ ಕಾರ್ಯ ಸಾಧ್ಯತೆ ವರದಿಯ ಮೇರೆಗೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ತೋಟಗಾರಿಕೆ ಇಲಾಖೆಯು ತಿಳಿಸಿರುತ್ತದೆ. |

**ಸಂಖ್ಯೆ:ಟಿಓಆರ್ 301 ಟಿಡಿವಿ 2024**

**(ಎಚ್.ಕೆ. ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

## ಶ್ರೀ ಕುಶಾಲಪ್ಪ ಎಂ. ಪಿ (ಸುಜಾ) ಇವರ ಚುಕ್ಕೆ ಗುರುತಿನ ಪ್ರ.ಸಂ: 1171ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಪ್ರಸ್ತಾವನೆ ವಿವರ | ಅಂದಾಜು ಮೊತ್ತ |
|---|---|---|
| | **ಡಾ|| ಮಂತರ್ ಗೌಡ, ಮಾನ್ಯ ಶಾಸಕರು,ಮಡಿಕೇರಿ ವಿಧಾನಸಭಾ ಕ್ಷೇತ್ರ, ಕೊಡಗು ಜಿಲ್ಲೆ** | |
| 1 | ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ತೋಳೂರು ಶೆಟ್ಟಳ್ಳಿ ಗ್ರಾಮಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುವ ಯಡದಂಟೆ ಜಲಪಾತಕ್ಕೆ ಮತ್ತು ಸಕಲೇಶಪುರ ತಾಲ್ಲೂಕಿನ ಒಡಳ್ಳಿ ಗ್ರಾಮದ ಗವಿಬೆಟ್ಟದ ಪ್ರವಾಸಿ ತಾಣಕ್ಕೆ ಸಂಪರ್ಕ ಕಲ್ಪಿಸಲು 3.ಕಿ.ಮೀ ರಸ್ತೆಯನ್ನು ಹಾಗೂ ಕಿರುದಾದ ಸೇತುವೆಯನ್ನು ನಿರ್ಮಿಸಲು ಅಂದಾಜುಪಟ್ಟಿಗೆ ಅನುಮೋದನೆ ನೀಡಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಅನುದಾನ ಬಿಡುಗಡೆ ಮಾಡುವ ಕುರಿತು. | 500.00 |
| | **ಡಾ|| ಮಂತರ್ ಗೌಡ, ಮಾನ್ಯ ಶಾಸಕರು,ಮಡಿಕೇರಿ ವಿಧಾನಸಭಾ ಕ್ಷೇತ್ರ, ಕೊಡಗು ಜಿಲ್ಲೆ** | |
| 2 | ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಮಲ್ಲಳ್ಳಿ ಜಲಪಾತಕ್ಕೆ ಕೇಬಲ್ ಕಾರ್ ಅಳವಡಿಸುವ ಕುರಿತು | 0.00 |
| | **ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಕೊಡಗು ಜಿಲ್ಲೆ, ಮಡಿಕೇರಿ** | |
| 3 | ರಾಜಾಸೀಟು ಉದ್ಯಾನವನದಲ್ಲಿ ಪುಟಾಣಿ ರೈಲು (Toy Train ) ಅಭಿವೃದ್ಧಿಪಡಿಸುವ ಬಗ್ಗೆ. | 123.50 |
| | **ಮಾನ್ಯ ಶಾಸಕರು, ವಿರಾಜಪೇಟೆ ವಿಧಾನಸಭಾ ಕ್ಷೇತ್ರ, ಕೊಡಗು ಜಿಲ್ಲೆ** | |
| 4 | ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ.10.00 ಕೋಟಿ ಅನುದಾನ ಬಿಡುಗಡೆ ಮಾಡುವ ಕುರಿತು | 1000.00 |
| | **ಮಾನ್ಯ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರು ಹಾಗೂ ಶಾಸಕರು, ವಿರಾಜಪೇಟೆ ವಿಧಾನಸಭಾ ಕ್ಷೇತ್ರ** | |
| 5 | ಪೊನ್ನಂಪೇಟೆ ತಾಲ್ಲೂಕು ಇರ್ಪು ಫಾಲ್ಸ್ ಅಭಿವೃದ್ಧಿ ಕಾಮಗಾರಿ | 25.00 |
| 6 | ವಿರಾಜಪೇಟೆ ತಾಲ್ಲೂಕು ಶ್ರೀ ಮಲೆತಿರಿಕೆ ಈಶ್ವರ ಟೆಂಪಲ್ ಅಭಿವೃದ್ಧಿ ಕಾಮಗಾರಿ | 25.00 |
| 7 | ವಿರಾಜಪೇಟೆ ತಾಲ್ಲೂಕು ಪೆರಂಬಾಡಿ ಕೆರೆ ಅಭಿವೃದ್ಧಿ ಕಾಮಗಾರಿ | 25.00 |
| 8 | ಪೊನ್ನಂಪೇಟೆ ತಾಲ್ಲೂಕು ಬಾರೆಪೊಲೆ ರಿವರ್ ಸ್ಕಿನಿಕ್ ಸ್ಪಾಟ್ ಮತ್ತು ರಿವರ್ ರಾಫ್ಟಿಂಗ್ ಅಭಿವೃದ್ಧಿ ಕಾಮಗಾರಿ | 25.00 |
| | **ಒಟ್ಟು** | **1723.50** |